ಎಂದುಕೊಳ್ಳುತ್ತ ಖಾನಾವಳಿಗೆ ಬರುವ ಹೊತ್ತಿಗೆ ತಾನೀಗ ಧರ್ಮ ಸಂಕಟದಲ್ಲಿ ಸಿಕ್ಕಿ ಬಿದ್ದಿರುವುದು ಅವನ ಪ್ರಜ್ಞೆಗೆ ಬಂದಿತ್ತು. ಮಾದೇವನಿಗೆ ಹೆಚ್ಚುಕಡಿಮೆ ಏನಾದರೂ ಆದರೆ ತನ್ನ ಮೇಲೆಯೇ ಬರುವುದು. ಊರು ಮಂದಿಗೆಲ್ಲ ಉಪಕಾರ ಮಾಡಲು ಹೋಗಿ ವಿನಾಕಾರಣ ಒತ್ತಡವನ್ನು ಮೈಮೇಲೆ ಎಳೆದುಕೊಳ್ಳುವ ತನ್ನ ಮೇಲೆ ತಾನೇ ಸಿಟ್ಟಾದ. ಕೊನೆಗೆ ಯೋಚಿಸಿ ತನ್ನ ಖಾನಾವಳಿ ಹಿಂದುಗಡೆಯಲ್ಲಿದ್ದ ಖಾಲಿ ಪತ್ರಾಸ್ ಶೆಡ್‌ನಲ್ಲಿ ಮಾದೇವನಿಗೆ ಇರಲು ತಾತ್ಕಾಲಿಕ ವ್ಯವಸ್ಥೆ ಮಾಡಿದ.

ಎಂದೂ ಪೊಲೀಸ್ ಸ್ಟೇಷನ್ ಮುಖ ನೋಡಿರದ ಮಾದೇವನಿಗೆ ಅಲ್ಲಿ ಒಂದು ರಾತ್ರಿ ಕಳೆದ ಪರಿಣಾಮವೋ ಏನೋ? ಎರಡು ಮೂರು ದಿನ ಅದರ ಗುಂಗಿನಿಂದ ಹೊರಬರಲು ಆಗಲಿಲ್ಲ. 'ನಮ್ಮ ಪಾಡಿಗೆ ನಾವಿದ್ರು ಈ ಪೊಲೀಸರಿಗೆ ಏನಾತದೋ ಮಾರಾಯಾ? ನಮ್ಮೂರೇ ಚೊಲೊ ಅಲ... ಯಾವಾಗ ಬೇಕಾದ್ರು, ಎಲ್ಲಿ ಬೇಕಾದ್ರು ತಿರುಗಾಡಬಹುದು' ಎಂದು ಮೊದಲ ಸಲ ತನ್ನೂರು ನೆನಪಿಸಿಕೊಂಡ. ಧರೆಪ್ಪ ಉಳಿದುಕೊಳ್ಳಲು ಜಾಗ ನೀಡಿರುವುದು ಅವನಿಗೆ ಎದೆ ತುಂಬಿ ಬಂದಿತ್ತು. ಜೀವನವಿಡಿ ಸೇವೆ ಮಾಡಿದರೂ ತಾನವರ ಋಣ ತೀರಿಸಲಾಗುವುದಿಲ್ಲ, ತನ್ನ ಪಾಲಿನ ದೇವರೆಂದು ಮನಸ್ಸಲ್ಲಿಯೇ ಕೈಮುಗಿದ.

ಬೆಳಗ್ಗೆ ಜಲ್ದಿ ಎದ್ದು ಖಾನಾವಳಿ ಮತ್ತು ಬೇಕರಿಗೆ ಒತ್ತುಗಾಡಿಯಲ್ಲಿ ನೀರು ತಂದು ಹಾಕುತ್ತಿದ್ದ. ಧರೆಪ್ಪ ಖಾನಾವಳಿಗೆ ಬರುವುದೇ ತಡ ಅವನ ಕಣ್ಣಿಗೆ ಬಿದ್ದು ಹೊಸದೇನಾದರೂ ಕೆಲಸ ಹೇಳಲಿ ಎಂದು ನಿರೀಕ್ಷಿಸುತ್ತಿದ್ದ. ಗಲ್ಲಾ ಮೇಲೆ ಕೂತ ಧರೆಪ್ಪ ತನ್ನದೇ ಲೋಕದಲ್ಲಿದ್ದು ಆಗೊಂದು ಈಗೊಂದು ಬರುವ ಗಿರಾಕಿಗಳಿಗೆ ಊಟ ಬಡಿಸುವ ಕಡೆಗೆ ಗಮನ ಕೊಟ್ಟಿರುತ್ತಿದ್ದ. ಬಾಯ್ತುಪ್ಪಿ ಮಾದೇವ 'ಏನಾದ್ರು ಕೆಲಸ ಕೊಡ್ರಿ ಮಾಡ್ಕೊತ ಇರ್ತೀನಿ' ಎಂದು ಕೇಳಿದರೆ 'ಈಗ ಇರವ್ರಿಗೆ ಕೆಲಸ ಇಲ್ಲ... ನಿನಗೇನು ಕೆಲ್ಸ ಕೊಡ್ಲಿ?' ಎಂಬುದು ಧರೆಪ್ಪನ ಸಿದ್ಧ ಉತ್ತರವಾಗಿತ್ತು.

ಅವತ್ತು ಕಲಾಭವನದಲ್ಲಿ ಯಾವುದೋ ಕಾರ್ಯಕ್ರಮ ಮುಗಿಸಿಕೊಂಡು ಹತ್ತಾರು ಮಹಿಳೆಯರು ಏಕಕಾಲಕ್ಕೆ ಲಿಂಗಾಯತ ಖಾನಾವಳಿಗೆ ಊಟಕ್ಕೆ ಬಂದರು. ಕೆಲಸಗಾರನೊಬ್ಬ ಗೈರಾಗಿರುವುದರಿಂದ ಒಮ್ಮೆಲೇ ಕೈತುಂಬ ಕೆಲಸ ಬಂದು ಧರೆಪ್ಪ ಗಡಿಬಿಡಿಗೆ ಒಳಗಾಗಿದ್ದ. ಮಾದೇವ ಟೇಬಲ್ ಒರೆಯಿಸುವುದು, ಗಿರಾಕಿಗಳು ಊಟ ಮಾಡಿದ ತಾಟನ್ನು ಒಯ್ದು ಇಡಲು ಅವನೊಂದಿಗೆ ಕೈ ಜೋಡಿಸಿದ. ಅಂದಿನಿಂದ ಮಾದೇವ ನೀರು ತಂದು ಹಾಕುವುದರ ಜೊತೆಗೆ ಈ ಹೊಸ ಜವಾಬ್ದಾರಿ ಹೆಗಲಿಗೆ ಬಿದ್ದು ಖಾನಾವಳಿಯಲ್ಲಿ ಅಧಿಕೃತವಾಗಿ ಕೆಲಸಕ್ಕೆ ಸೇರಿದಂತಾಯಿತು. ಈಗವನು ಎಲ್ಲರಂತೆ ಧರೆಪ್ಪನನ್ನು ಕಾಕಾ ಎಂದೇ ಕರೆಯುತ್ತಿದ್ದ. ಕಾಕಾ ಸಿಟ್ಟಲ್ಲಿ ಏನೇ ಬೈದರೂ, ಅಂದರೂ ಅರಗಿಸಿಕೊಳ್ಳುವ ತಾಳ್ಮೆ ಬಂದು ಬಿಟ್ಟಿತ್ತು. ಇದರ ನಡುವೆ ಖಾನಾವಳಿಯಲ್ಲಿ ಎಷ್ಟೇ ಕೆಲಸವಿದ್ದರೂ ಮುಗಿಸಿಕೊಂಡು ಸಾಯಂಕಾಲದ ಹೊತ್ತಿಗೆ ತನಗೆ ಈ ಮೊದಲು ಆಶ್ರಯ ನೀಡಿದ್ದ ತಂಗುದಾಣಕ್ಕೆ ಹೋಗಿ ಅಲ್ಲಿದ್ದ ನಾಯಿಗೆ ಬಿಸ್ಕತ್ತು, ಬನ್ ಮತ್ತು ಖಾನಾವಳಿಯಲ್ಲಿ ಅಳಿದುಳಿದ ಆಹಾರ ಪದಾರ್ಥಗಳನ್ನು ಒಯ್ದು ತಿನ್ನಿಸಿ ಅದರ ಜೊತೆಗೆ ಕಾಲ ಕಳೆದು ಬರುತ್ತಿದ್ದ. ಮಾದೇವ ಬರುವ ದಾರಿಯನ್ನೇ ಕಾಯುತ್ತಿದ್ದ ನಾಯಿ ಅವನ ಮೈಮೇಲೆ ಜಿಗಿದಾಡಿ, ಬಾಲ ಅಲ್ಲಾಡಿಸುತ್ತ ಕುಣಿದಾಡಿ, ಥ್ಯಾಂಕ್ಸ್ ಕೊಟ್ಟು ಖುಷಿ ವ್ಯಕ್ತಪಡಿಸುತ್ತಿತ್ತು.

* * *

ನೆಮ್ಮದಿಯಾಗಿದ್ದ ಮನೆಯಲ್ಲಿ ಎಗ್ದಮ್ ಹೆಗ್ಗಣ ಬಂದು ಹೊಕ್ಕಿಕೊಂಡಾಗ ಮನೆಯವರು ಗಡಿಬಿಡಿಗೆ ಒಳಗಾಗುವಂತೆ ಧರೆಪ್ಪನ ಮಗ ಮಣಿಕಂಠ ಬಂದಾಗ ಖಾನಾವಳಿಯಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗುತ್ತಿತ್ತು. ಆಗ ಧರೆಪ್ಪನ ಮುಖ ನೋಡುವುದೇ ಬೇಡ. ಸಿಟ್ಟು ಬಂದರೂ ತೋರಲಾಗದೆ, ಅಳು ಬಂದರೂ ಅಳಲಾಗದೆ ಎಂತಹ ಮಗನ ಕೊಟ್ಟೆ ದೇವ್ರೇ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಿದ್ದ. 'ನನಗ್ ಇಷ್ಟು ರೊಕ್ಕ ಬೇಕು ಅಂದ್ರ... ಬೇಕು' ಎಂದು ಹಟ ಹಿಡಿದು ಮಣಿಕಂಠ ಕೂತು ಬಿಡುತ್ತಿದ್ದ. ಗಿರಾಕಿಗಳಿಗೆ ತೊಂದರೆ ಆಗುವುದೆಂದು ಧರೆಪ್ಪ ಅವುಡುಗಚ್ಚಿ ಸಿಟ್ಟು ತಡೆದುಕೊಂಡು ಅವನಿಗೆ ಬೇಡಿದಷ್ಟು ಹಣ ಕೊಟ್ಟು ಕಳಿಸುತ್ತಿದ್ದ. ಒಂದೊಂದು ಸಲ ತಾಳ್ಮೆ ಕಳೆದುಕೊಂಡು ನಾ ಫೇರ್... ನೀ ಫೇರ್ ಎಂದು ತಂದೆ ಮಗ ಜಗಳಾಡುವುದು ಇತ್ತು.

ಅದೇ ಒತ್ತಡದಲ್ಲಿದ್ದ ಧರೆಪ್ಪನಿಗೆ ಅವತ್ತೊಂದಿನ ಎದೆ ನೋವು ಕಾಣಿಸಿಕೊಂಡಿತು. ಆಸ್ಪತ್ರೆಗೆ ಹೋದಾಗ